ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ/02/ಎಲ್ಆರ್‌ಡಿಸಿ/2018-19 /2794

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:19-01-2019

**-:ಸುತ್ತೋಲೆ:-**

ವಿಷಯ: 2017-18ನೇ ಸಾಲಿನ "41ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದ ROLLING TROPHY ಗಳನ್ನು ಹಿಂದಿರುಗಿಸುವ ಹಾಗೂ ಕ್ರೀಡಾಪಟುಗಳ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 25-10-2018 ರಂದು ನಿರ್ದೇಶಕರ ಕೊಠಡಿಯಲ್ಲಿ ನಡೆದ "ಕೇಂದ್ರ ಕ್ರೀಡಾ ಸಮಿತಿ" ಸಭಾ ನಡವಳಿಗಳು.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್, ಕ್ರೀಡಾಕೂಟ" ವನ್ನು ದಿನಾಂಕ:02-02-2019 ಮತ್ತು 03-02-2019 ರಂದು ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇಲ್ಲಿ ನಿರ್ದೇಶನಾಲಯದ ಸಹಯೋಗದಲ್ಲಿ ಆಯೋಜಿಸಲಾಗುತ್ತಿದ್ದು. 2017-18ನೇ ಸಾಲಿನಲ್ಲಿ ಪಡೆದಿದ್ದ ROLLING TROPHY ಗಳನ್ನು ದಿನಾಂಕ:28.01.2019 ರೊಳಗಾಗಿ ಪ್ರಾಂಶುಪಾಲರು, ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇವರಿಗೆ ತಲುಪಿಸುವಂತೆ ಸೂಚಿಸಲಾಗಿದೆ. ಸತತವಾಗಿ ಮೂರಭಾರಿ ವಿಜೇತರಾದ ಕ್ರೀಡಾಪಟು/ತಂಡದ ಸಂಸ್ಥೆಯು ROLLING TROPHY ಯನ್ನು ಶಾಸ್ವತವಾಗಿ ತಮ್ಮ ಸಂಸ್ಥೆಯಲ್ಲೆ ಉಳಿಸಿಕೊಳ್ಳಲು ಅವಕಾಶವಿರುತ್ತದೆ. ಬದಲಿ ವ್ಯವಸ್ಥೆಯನ್ನು ಮಾಡಲು ROLLING TROPHY ಯನ್ನು ಶಾಸ್ವತವಾಗಿ ಸಂಸ್ಥೆಯಲ್ಲೆ ಉಳಿಸಿಕೊಳ್ಳುವವರು ಸದರಿ TROPHYಗಳ ವಿವರವಾದ ಮಾಹಿತಿಯನ್ನು ಕೂಡಲೇ dh.jagadeesh@gmail.com ಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ,

1. ಪ್ರಾಂಶುಪಾಲರು, ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು.
2. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು.
3. ಪ್ರಾಂಶುಪಾಲರು, ಡಾ॥ ಟಿ.ಎಂ.ಎ ಪೈ ಪಾಲಿಟೆಕ್ನಿಕ್, ಮಣಿಪಾಲ್.
4. ಪ್ರಾಂಶುಪಾಲರು, ಮೋತಿಚೆಂದ್ ಲೆಂಗಡೆ ಭರತೇಶ್ ಪಾಲಿಟೆಕ್ನಿಕ್, ಬೆಳಗಾವಿ.
5. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ.
6. ಪ್ರಾಂಶುಪಾಲರು, ಜೆ ಎಸ್ ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು.
7. ಪ್ರಾಂಶುಪಾಲರು, ಕೆ ಎಲ್ ಇ ಸಂಸ್ಥೆ ಪಾಲಿಟೆಕ್ನಿಕ್, ಹುಬ್ಬಳ್ಳಿ.
8. ಪ್ರಾಂಶುಪಾಲರು, ಎಸ್ ಎನ್ ಎಸ್ ಪಾಲಿಟೆಕ್ನಿಕ್, ಸುಂಕದಕಟ್ಟೆ.
9. ಪ್ರಾಂಶುಪಾಲರು, ಎನ್ ಆರ್ ಎ ಎಂ ಪಾಲಿಟೆಕ್ನಿಕ್, ನಿಟ್ಟೆ.
10. ಪ್ರಾಂಶುಪಾಲರು, ಎಂ ಇ ಐ ಪಾಲಿಟೆಕ್ನಿಕ್, ಬೆಂಗಳೂರು.
11. ಪ್ರಾಂಶುಪಾಲರು, ಕೆ ವಿ ಜಿ ಪಾಲಿಟೆಕ್ನಿಕ್, ಸೂಳ್ಯ.
12. ಪ್ರಾಂಶುಪಾಲರು, ಕೆ ಎಚ್ ಕೆ ಪಾಲಿಟೆಕ್ನಿಕ್, ದಾರವಾಡ.
13. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕೆ ಆರ್ ಪೇಟೆ.
14. ಪ್ರಾಂಶುಪಾಲರು, ಶಾಂತಿನಿಕೇತನ ಪಾಲಿಟೆಕ್ನಿಕ್, ರಾಮನಗರ.
15. ಪ್ರಾಂಶುಪಾಲರು, ಎನ್ ವಿ ಪಾಲಿಟೆಕ್ನಿಕ್, ಗುಲ್ಬಾರ್ಗ.
16. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಹರಿಹರ.
17. ಪ್ರಾಂಶುಪಾಲರು, ಜೆ.ಎಸ್.ಎಸ್ ವಿಶೇಷ ಚೇತನ ಪಾಲಿಟೆಕ್ನಿಕ್, ಮೈಸೂರು.

ಪ್ರತಿ,

1. ಪ್ರಾಂಶುಪಾಲರು, ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇವರ ಮಾಹಿತಿಗಾಗಿ.
2. ಇ-ಆಡಳಿತ ಶಾಖೆಗೆ ಡಿಟಿಇ ಅಂತರಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಎಲ್ಆರ್‌ಡಿಸಿ/2018-19/2794

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 21-01-2019.

## -:ಸುತ್ತೋಲೆ:-

ವಿಷಯ: 2018-19 ನೇ ಸಾಲಿನ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದಲ್ಲಿ ಪಾಲ್ಗೊಳ್ಳುವ ಬಗ್ಗೆ.

ಉಲ್ಲೇಖ: ದಿನಾಂಕ: 25-10-2018 ರಂದು ನಿರ್ದೇಶಕರ ಕೊಠಡಿಯಲ್ಲಿ ನಡೆದ ಕೇಂದ್ರ ಕ್ರೀಡಾ ಸಮಿತಿ ಸಭೆಯ ನಡವಳಿಗಳು.

((((()))))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2018-19 ನೇ ಸಾಲಿನ "42 ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು ದಿನಾಂಕ: 02-02-2019 ಮತ್ತು 03-02-2019 ರಂದು ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇಲ್ಲಿ ನಿರ್ದೇಶನಾಲಯದ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿದ್ದು, ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮತ್ತು ವ್ಯವಸ್ಥಾಪಕರುಗಳು ದಿನಾಂಕ:01.02.2019 ರಂದು ಸಂಜೆ 4.00 ಗಂಟೆ ಯೊಳಗಾಗಿ ಪ್ರಾಂಶುಪಾಲರು ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ,

ಮುಂದುವರಿದು ಎಲ್ಲಾ ಕ್ರೀಡಾಪಟುಗಳು ಕಡ್ಡಾಯವಾಗಿ ವೈದ್ಯಕೀಯ ಪ್ರಮಾಣ ಪತ್ರವನ್ನು ವರದಿ ಮಾಡಿಕೊಳ್ಳುವ ಸಮಯದಲ್ಲಿ ಹಾಜರುಪಡಿಸುವುದು. ಮತ್ತು ತಂಡದ ವ್ಯವಸ್ಥಾಪಕರುಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮರಳಿಪಡೆಯುವ ಠೇವಣಿ ರೂ.500.00 ಗಳನ್ನು ಜಮ ಮಾಡಲು ಸೂಚಿಸಲಾಗಿದೆ, ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಯವರು ವೈದ್ಯಕೀಯ ಪ್ರಮಾಣ ಪತ್ರದ ವೆಚ್ಚ ಮತ್ತು ಠೇವಣಿಯ ಹಣವನ್ನು ಕ್ರೀಡಾಶುಲ್ಕದಿಂದ ಭರಿಸಬಹುದಾಗಿದೆ, ಒಂದು ಸಂಸ್ಥೆಯಿಂದ ಒಬ್ಬ ಸಿಬ್ಬಂದಿಯವರಿಗೆ ಮಾತ್ರ ವಸತಿ ವ್ಯವಸ್ಥೆಯನ್ನು ನೀಡಲಾಗುವುದು, ಅವಶ್ಯಕತೆ ಇದ್ದಲ್ಲಿ ಮಾತ್ರ ಹೆಚ್ಚುವರಿಯಾಗಿ ಒಬ್ಬರು ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಲು ಎಲ್ಲಾ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ, ಸುರಕ್ಷತೆಯ ದೃಷ್ಟಿಯಿಂದ ತಮ್ಮ ಸಂಸ್ಥೆಯ ಕ್ರೀಡಾಪಟುಗಳಿಗೆ ನೀಡುವ ಕೊಠಡಿಗೆ ಬೀಗ ಹಾಕಿಕೊಳ್ಳಲು ಒಂದು ಬೀಗವನ್ನು ತರಲು ಸಹ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಇ-ಗೌರ್ವನೆನ್ಸ್ ವಿಭಾಗಕ್ಕೆ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವುದು.

ಪ್ರತಿ:

1. ಪ್ರಾಂಶುಪಾಲರು ಶ್ರೀಮತಿ ಎಲ್. ವಿ ಪಾಲಿಟೆಕ್ನಿಕ್, ಹಾಸನ, ಇವರ ಮಾಹಿತಿಗಾಗಿ.